ಗೂಡಿನಲ್ಲಿ ಸಾವಿರಾರು ಸಣ್ಣ ಸಣ್ಣ ಕಿಂಡಿಗಳು. ಜೇನು ಹುಳುಗಳು ಭರ್ರೆಂದು ಹಾರಿಬಂದು ಒಂದೊಂದು ಕಿಂಡಿಯಲ್ಲೂ ಮಕರಂದವನ್ನು ತುಂಬಿ ಮತ್ತೆ ಭರ್ರನೆ ಹಾರಿ ಹೋಗುತ್ತಿದ್ದವು. ಒಂದು ಹನಿ ಜೇನು ತುಪ್ಪಕ್ಕಾಗಿ ನೂರಾರು ಹೂವುಗಳಿಗೆ ಅವು ಭೇಟಿ ಕೊಡುತ್ತವೆ ಎಂದು ಸೋಮುವಿಗೆ ನೆನಪಾಯಿತು.

ಅಷ್ಟರಲ್ಲಿ ದೊಡ್ಡ ರಾಣಿ ಜೇನು ನೊಣ ಗರ್ಜಿಸಿತು:

'ಎಲ್ಲಿ ಬರೀ ಬಾಯಲ್ಲಿ ಬಂದಿದೀಯಲ್ಲ? ಜೇನು ಎಲ್ಲಿ?'

ಸೋಮು ಹೆದರಿಕೊಂಡು, 'ಬೆ ಬ್ಬೆ ಬ್ಬೆ' ಎಂದ.

'ಹೋಗು ಜೇನು ತಗೊಂಡು ಬಾ. ಸೋಮಾರಿಗೆ ಇಲ್ಲಿ ಜಾಗವಿಲ್ಲ' ಎಂದಿತು ರಾಣಿ.

ಸೋಮು ಮಾವಿನಮರದ ಕೆಳಗಿನ ಕಲ್ಲು ಬೆಂಚಿಗೆ ಬಂದ. ಬಂದ ಕೂಡಲೇ ಮತ್ತೆ ಹುಡುಗನಾಗಿಬಿಟ್ಟ.

'ಅಬ್ಬ! ಆ ರಾಣೀನ ನೋಡಿದರೆ ಅಮ್ಮನ್ನ ನೋಡಿದ ಹಾಗೇ ಆಯ್ತು!' ಎಂದುಕೊಂಡು ಸುತ್ತಮುತ್ತ ನೋಡಿದ.

ಒಂದು ಗುಬ್ಬಿ ಬಾಯಲ್ಲಿ ಒಂದು ಹುಳುವನ್ನು ಕಚ್ಚಿಕೊಂಡು ಹಾರಿ ಬರುತ್ತಿತ್ತು. ಎಷ್ಟು ಬೇಗ ಬೇಗ ರೆಕ್ಕೆ ಬಡಿಯುತ್ತೆ. ಏನಪ್ಪಾ ಅಂಥಾ ಆತುರ? ಅದು ಮರದ ಮೇಲಿದ್ದ ಒಂದು ಗೂಡಿಗೆ ಹೋಯಿತು. ಅಲ್ಲಿ ಚಿಲಿ ಪಿಲಿ ಶಬ್ದ. ಒಂದು ನಿಮಿಷ ಶಾಂತಿ. ಮತ್ತೆ ಗುಬ್ಬಿ ಪುರ್ರನೆ ಹಾರಿಹೋಯಿತು. ನಾನೂ ಒಂದು ಗುಬ್ಬಿ ಆಗಿದ್ದರೆ ಆ ಗೂಡಿನಲ್ಲಿ ಅದೇನು ಚಿಲಿ ಪಿಲಿ ಎಂದು ನೋಡಬಹುದಿತ್ತು ಅಂದುಕೊಂಡ.

ಆ ಕ್ಷಣದಲ್ಲಿ ಅವನೊಂದು ಗುಬ್ಬಿಯಾಗಿಬಿಟ್ಟ. ತಾನೂ ರೆಕ್ಕೆ ಬಡಿಯುತ್ತಾ ಆ ಗೂಡಿನ ಬಳಿಗೆ ಹೋದ. ಅದರಲ್ಲಿ ಎರಡು ಪುಟ್ಟ ಪುಟ್ಟ ಗುಬ್ಬಿ ಮರಿಗಳಿದ್ದವು. ಸೋಮು–ಗುಬ್ಬಿಯನ್ನು ನೋಡುತ್ತಿದ್ದಂತೆಯೇ ಅವು ಅಗಲಕ್ಕೆ ಬಾಯಿ ತೆರೆದು ಶಬ್ದ ಮಾಡತೊಡಗಿದವು. ತಾಯಿ ಗುಬ್ಬಿಯ ಕೊಕ್ಕಿನಿಂದ ತುತ್ತು ಇಡಿಸಿಕೊಳ್ಳಲು ಅವುಗಳಿಗೆ ಆಸೆ. ಆದರೆ ಸೋಮು ಖಾಲಿ ಕೊಕ್ಕಿನಲ್ಲಿ ಬಂದಿದ್ದ.

'ಊಟ ಎಲ್ಲಿ? ಊಟ ಎಲ್ಲಿ?' ಎಂದು ಗುಬ್ಬಿ ಮರಿಗಳು ಅರಚಿದವು.

ಸೋಮು ಹೆದರಿಕೊಂಡು, 'ಬೆ ಬ್ಬೆ ಬ್ಬೆ' ಎಂದ.

'ಹೋಗು ಊಟ ತಗೊಂಡು ಬಾ. ಸೋಮಾರಿಗೆ ಇಲ್ಲಿ ಜಾಗವಿಲ್ಲ' ಎಂದವು ಗುಬ್ಬಿಮರಿಗಳು.

ಸೋಮು ಗುಬ್ಬಿಗೆ ತಲೆ ಗಿರ್ರನೆ ತಿರುಗಿದಂತಾಯಿತು. ಅಷ್ಟು ಪುಟ್ಟ ಗುಬ್ಬಿ ಮರಿಗಳು ಹೇಗೆ ಬೈಯುತ್ತವಲ್ಲ! ಸೋಮು ಹಾರಿಕೊಂಡು ಬಂದು ಕಲ್ಲು ಬೆಂಚಿನ ಮೇಲೆ ಕುಳಿತುಕೊಂಡ. ಅವನು ಮತ್ತೆ ಹುಡುಗನಾಗಿಬಿಟ್ಟ. ಸೋಮಾರಿಗೆ ಜಾಗವಿಲ್ಲ ಎಂಬ ಮಾತುಗಳೇ ಅವನ ಕಿವಿಯಲ್ಲಿ ಗುಂಯ್ಗುಡುತ್ತಿದ್ದವು. ತಾನೂ ಸೋಮಾರಿತನ ಬಿಟ್ಟು ಚುರುಕಾಗಿ ಎಲ್ಲ ಕೆಲಸ ಮಾಡಬೇಕು ಎಂದು ನಿರ್ಧರಿಸಿದ.

*****

ಅಜ್ಜ ಕತೆ ಮುಗಿಸಿ ನಕ್ಕರು. ಅಜಿತ ಕೇಳಿದ,

'ಹುಡುಗನಾಗಿದ್ದವನು ಗೊದ್ದ, ಜೇನುಹುಳ, ಗುಬ್ಬಿ ಹೇಗಾದ? ಮತ್ತೆ ಹುಡುಗ ಹೇಗಾದ?'

'ಇದು ಕಥಾಲೋಕ. ಇಲ್ಲಿ ಏನುಬೇಕಾದ್ರೂ ಆಗುತ್ತೆ!' ಎಂದು ಅಜ್ಜ ನಕ್ಕರು. ಅಜಿತನೂ ನಕ್ಕ. ರಜದ ಹೋಂ ವರ್ಕ್ ಮಾಡಲು ಹೋದ.